## ನಿತ್ಯದ ಉಪಯೋಗಕ್ಕೆ ಉಪ್ಪುಉಪ್ಪಿನಕಾಯಿಯ ಮರಿಗೆ

ಹಿಂದಿನ ಕಾಲದಲ್ಲಿ ದಿನ ನಿತ್ಯ ಅಡುಗೆ ಮನೆಯಲ್ಲಿ ಉಪಯೋಗಿಸುತ್ತಿದ್ದ ಹಲವು ಪರಿಕರಗಳು ಜನಮಾನಸದಿಂದ ಬಹುತೇಕ ಮರೆಯಾಗಿವೆ. ಅವುಗಳಲ್ಲಿ ಕೆಲವು ಪರಿಕರಗಳು ವಸ್ತುಪ್ರದರ್ಶನಾಲಯಗಳಲ್ಲಿ ಮಾತ್ರ ಕಾಣಲು ಸಿಗುತ್ತಿವೆ. ಆದರೆ, ಅಪರೂಪದಲ್ಲಿ ಅಪರೂಪವೆಂಬಂತೆ ಕೆಲವು ಮನೆಗಳಲ್ಲಿ ಇಂದಿಗೂ ಹಳೆಕಾಲದಲ್ಲಿ ಉಪಯೋಗಿಸುತ್ತಿದ್ದ ಪರಿಕರಗಳನ್ನು ಕಾಣಬಹುದು. ಚಿಕ್ಕಮಗಳೂರಿನ ಕುದುರೆಮುಖ ಸಮೀಪದ 'ಜಾಂಬಳೆ' ಗ್ರಾಮದ ಮಹಾವೀರ ಎಂಬುವರ ಮನೆಯಲ್ಲಿ 'ಮರಿಗೆ' ನನ್ನನ್ನು ಆಕರ್ಷಿಸಿತು. ಸುಮಾರು 9 ಇಂಚು ಉದ್ದ, 3 ಇಂಚು ಎತ್ತರವಿರುವ ಸಂಪೂರ್ಣವಾಗಿ ಮರದಿಂದ ತಯಾರಿಸಲಾಗಿದೆ. ಈ ಮರಿಗೆಯಲ್ಲಿ ಎರಡು ವಿಭಾಗಗಳಿದ್ದು, ಒಂದರಲ್ಲಿ ಉಪ್ಪು ಹಾಗೂ ಇನ್ನೊಂದರಲ್ಲಿ ಉಪ್ಪಿನಕಾಯಿ ಹಾಕಿ ಉಪಯೋಗಿಸಲಾಗುತ್ತದೆ. ಹಲಗೆಯಿಂದ ತಯಾರಿಸಲಾದ ಮುಚ್ಚಳ ಹಾಗೂ ಕೈಪಿಡಿಕೆಯನ್ನೂ ಹೊಂದಿದ್ದು ನೋಡಲು ಆಕರ್ಷಣೀಯವಾಗಿದೆ. ಸುಮಾರು 50 ವರ್ಷಗಳಷ್ಟು ಹಳೆಯದಾದ ಈ ಮರಿಗೆಯನ್ನು ಈಗಲೂ ಕೆಲವರು ಉಪಯೋಗಿಸುತ್ತಾರೆ.

■ ಜಿ.ನಾಗೇಂದ್ರ, ಮಂಗಳೂರು



## ಫೋಟೊಗೊಂದು ಚೌಕಟ್ಟು

ಹಸಿರು ಗಿಡಮರದ ಹಿನ್ನೆಲೆಯಿರುವ ಈ ಅಂದವಾದ, ವಿನೂತನ ಮಾದರಿಯ ಫೋಟೊ ಫ್ರೇಮ್ ಶಿಕಾಗೋದ 'ನೇವಿ ಪೇರಿ' ಎಂಬಲ್ಲಿನ ಮಕ್ಕಳ ಮ್ಯೂಸಿಯಮ್ ಹಿಂಭಾಗದಲ್ಲಿದೆ. ಕಬ್ಬಿಣದ ಕಂಬಗಳನ್ನೊಳಗೊಂಡ ಚೌಕಟ್ಟಿಗೆ ಹಳೆ ಟೈರಿನಿಂದ ಅಂದವಾಗಿ ವಿನ್ಯಾಸ ಮಾಡಲಾಗಿದೆ. ಅಲ್ಲಿಗೆ ಭೇಟಿ ನೀಡುವ ಬಹುತೇಕರು ಆ ಫ್ರೇಮ್‌ನಲ್ಲಿ ಬಂಧಿಗಳಾಗುತ್ತಾರೆ. ಹಿಂಭಾಗದಲ್ಲಿ ಎರಡು ಕಬ್ಬಿಣದ ಕುರ್ಚಿಗಳೂ ಇವೆ.

■ ಸೀತಾ ಎಸ್. ನಾರಾಯಣ, ಹರಿಹರ

